ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 113/2014

(ಫ್ರಾಸಾ-7 ಚಾಸಾ-10 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 02.01.2023.

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಶ |
| ತಂದೆಯ ಹೆಸರು | - | ರಾಮಯ್ಯ |
| ವಯಸ್ಸು | - | 28 ವರ್ಷ, |
| ಉದ್ಯೋಗ | - | ಎಲೆಕ್ಟ್ರೀಷಿಯನ್ |
| ವಾಸ | - | ಮೇಲಿನ ನಾಯಕಂಡ್ರಹಳ್ಳಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ ತೋರಿಸಲಾದ ದಾಖಲೆ ಮೇಲೆ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆ ಆಟೋ ಅಮಾನತು ಮಹಜರ್ ಇದ್ದು ಅದನ್ನು ನಿಪಿ-15 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ-15(ಎ) ಎಂದು ಗುರ್ತಿಸಲಾಯಿತು. ನಿಪಿ-15 ಕ್ಕೆ ಈಗ ಸುಮಾರು 5-6 ವರ್ಷಗಳ ಹಿಂದೆ ನಮ್ಮ ಊರಿನ ಬಸ್ ಸ್ಟಾಂಡ್ ಹತ್ತಿರ ಸಹಿ ಮಾಡಿದ್ದೇನೆ. ನಮ್ಮ ಊರಿನ ಹತ್ತಿರ ಅಪಘಾತಗಳಾಗುತ್ತಿದ್ದರಿಂದ ಪೋಲಿಸರು ನಿಪಿ-15 ಕ್ಕೆ ಸಹಿ ಮಾಡು ಎಂದು ಕೇಳಿದ್ದರಿಂದ ಅದಕ್ಕೆ ಸಹಿ ಮಾಡಿದ್ದೇನೆ. ಈಗ ತೋರಿಸಿದ ನಿಪಿ-9 ರಿಂದ 12 ಫೋಟೋಗಳಲ್ಲಿನ ಆಟೋವನ್ನು ನಾನು ನೋಡಿಲ್ಲ. ಸದರಿ ಆಟೋವನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ. ಮೃತ 5 ನೇ ಆರೋಪಿ ನಟರಾಜನಾಯ್ಕನ ಪರಿಚಯ ಇದೆ. ಆತ ನಮ್ಮ ಸಮಕ್ಷಮ ನಿಪಿ-9 ರಿಂದ 12 ರಲ್ಲಿ ಕಾಣುವ ಆಟೋವನ್ನು ಹಾಜರುಪಡಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ದಿಃ29.05.2014 ರಂದು ಮಧ್ಯಾಹ್ನ ಪೋಲಿಸರು ಮೃತ 5 ನೇ

ಆರೋಪಿಯೊಂದಿಗೆ ಕೆಳಗಿನ ನಾಯಕಂಡ್ರಹಳ್ಳಿಯಲ್ಲಿನ ಸದರಿ 5 ನೇ ಆರೋಪಿಯ ಮನೆಯ ಹತ್ತಿರ ಬಂದಿದ್ದರು ಎಂದರೆ ಸರಿಯಲ್ಲ. ಅಲ್ಲಿ ನನ್ನನ್ನು ಮತ್ತು ಚಾಸಾ-9 ಮತ್ತು 11 ಇವರನ್ನು ಸಹ ಪಂಚಸಾಕ್ಷಿದಾರರಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ಮೃತ 5 ನೇ ಆರೋಪಿ ತನ್ನ ಮನೆಯ ಹತ್ತಿರ ನಿಲ್ಲಿಸಿದ್ದ ನಿಪಿ-9 ರಿಂದ 12 ರಲ್ಲಿರುವ ಆಟೋವನ್ನು ತೋರಿಸಿದ ಹಾಜರುಪಡಿಸಿದ ಎಂದರೆ ಸರಿಯಲ್ಲ. ಸದರಿ ಆಟೋ ಸಂಖ್ಯೆ ಕೆಎ-43-3654 ಇತ್ತು ಎಂದರೆ ಗೊತ್ತಿಲ್ಲ. ಪೋಲಿಸರು ಅದನ್ನು ನಿಪಿ-15 ರಂತೆ ನಮ್ಮ ಸಮಕ್ಷಮ ಮಧ್ಯಾಹ್ನ 03.30 ರಿಂದ 04.15 ರ ಸಮಯದಲ್ಲಿ ಮಹಜರ್ ಮಾಡಿ ಅಮಾನತುಪಡಿಸಿಕೊಂಡು ಅಲ್ಲೇ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು